**All India Radio: Bangalore**
**National Bulletin In Kannada**
**25.03.2025 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*****************

ಮುಖ್ಯಾಂಶಗಳು

೧. ದಾಖಲೆಯ ೧ ಲಕ್ಷ ೨೭ ಸಾವಿರ ಕೋಟಿ ರೂಪಾಯಿ ತಲುಪಿದ ದೇಶೀಯ ರಕ್ಷಣಾ ಉತ್ಪಾದನೆ

೨. ಜಿಎಸ್‌ಡಿಪಿಯಲ್ಲಿ ೩೬.೪೬ ಲಕ್ಷ ಕೋಟಿ ರೂಪಾಯಿಗಳೊಂದಿಗೆ ಅಗ್ರಸ್ಥಾನ ಪಡೆದ ಮಹಾರಾಷ್ಟ್ರ

೩. ದೆಹಲಿ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ರೇಖಾಗುಪ್ತ ಅವರಿಂದ ೨೦೨೫-೨೬ನೇ ಸಾಲಿನ ಆಯವ್ಯಯ ಮಂಡನೆ

೪. ಏಷ್ಯನ್ ಕಪ್ ಫುಟ್ಬಾಲ್; ೨೦೨೭ರ ಅರ್ಹತಾ ನಿರ್ಣಾಯಕ ಮೂರನೇ ಸುತ್ತಿನ ಪಂದ್ಯದಲ್ಲಿ ಭಾರತ-ಬಾಂಗ್ಲಾದೇಶ ಸೆಣಸು

೫. ಐಪಿಎಲ್ ಟಿ-೨೦ ಕ್ರಿಕೆಟ್; ಗುಜರಾತ್ ಟೈಟನ್ಸ್ - ಪಂಜಾಬ್ ಕಿಂಗ್ಸ್ ಇಂದು ಮುಖಾಮುಖಿ

*****************

ಮೇಕ್ ಇನ್ ಇಂಡಿಯಾ ಉಪಕ್ರಮ ಆರಂಭಗೊಂಡ ನಂತರ, ಭಾರತ ೨೦೨೩-೨೪ರಲ್ಲಿ ದೇಶೀಯ ರಕ್ಷಣಾ ಉತ್ಪಾದನೆಯಲ್ಲಿ ಇದುವರೆಗಿನ ಅತ್ಯಧಿಕ ಬೆಳವಣಿಗೆಯನ್ನು ಸಾಧಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ದಾಖಲೆಯ ಒಂದು ಲಕ್ಷ ೨೭ ಸಾವಿರ ಕೋಟಿ ರೂಪಾಯಿಗಳನ್ನು ರಕ್ಷಣಾ ಉತ್ಪಾದನೆ ತಲುಪಿದೆ. ಇದರ ಮೌಲ್ಯವು ೨೦೧೪-೧೫ನೇ ಸಾಲಿನಲ್ಲಿ ಇದ್ದ ೪೬ ಸಾವಿರ ೪೨೯ ಕೋಟಿ ರೂಪಾಯಿಗಳಿಗಿಂತ ಶೇ. ೧೭೪ ರಷ್ಟು ಹೆಚ್ಚಾಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಒಂದು ಕಾಲದಲ್ಲಿ, ರಕ್ಷಣಾ ಉಪಕರಣಗಳ ಪೂರೈಕೆಗೆ, ವಿದೇಶಿ ರಫ್ತುದಾರರ ಮೇಲೆ ಅವಲಂಬಿತವಾಗಿದ್ದ ದೇಶವು ಈಗ ಸ್ಥಳೀಯ ಉತ್ಪಾದನೆಯಲ್ಲಿ ಉದಯೋನ್ಮುಖ ಶಕ್ತಿಯಾಗಿ ನಿಂತಿದೆ. ಸ್ವದೇಶಿ ಸಾಮರ್ಥ್ಯಗಳ ಮೂಲಕ ತನ್ನದೇ ಆದ ಮಿಲಿಟರಿ ಬಲವನ್ನು ರೂಪಿಸುತ್ತಿದೆ ಎಂದು ಸಚಿವಾಲಯ ಹೇಳಿದೆ.

ರಕ್ಷಣಾ ರಫ್ತುಗಳು ೨೦೧೩-೧೪ರಲ್ಲಿ ೬೮೬ ಕೋಟಿ ರೂಪಾಯಿಗಳಿಂದ ೨೧ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಸಾರ್ವಕಾಲಿಕ ಗರಿಷ್ಠಕ್ಕೆ ಏರಿಯನ್ನು ಕಂಡಿದೆ. ಇದು ಕಳೆದ ದಶಕದಲ್ಲಿ ೩೦ ಪಟ್ಟು ಹೆಚ್ಚಳವಾಗಿದೆ ಎಂಬುದು ಗಮನಾರ್ಹ.

******************

ರಾಷ್ಟ್ರೀಯ ವಾರ್ತೆಗಳು ೨೫.೦೩.೨೦೨೫ ೭.೩೫ ಜಿಎಸ್‌ಡಿಪಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ದೂರದೃಷ್ಟಿಯ ನಾಯಕತ್ವದಲ್ಲಿ, ಪ್ರತಿಯೊಂದು ರಾಜ್ಯವು ಅಭಿವೃದ್ಧಿಯ ಹಾದಿಯಲ್ಲಿ ಸಾಗುತ್ತಿದೆ ಮತ್ತು ಮಹಾರಾಷ್ಟ್ರವು ಪ್ರಸ್ತುತ ೩೬.೪೬ ಲಕ್ಷ ಕೋಟಿ ರೂ.ಗಳೊಂದಿಗೆ ಅತಿದೊಡ್ಡ ಒಟ್ಟು ದೇಶೀಯ ಉತ್ಪನ್ನ-ಜಿಎಸ್‌ಡಿಪಿಯೊಂದಿಗೆ ಮುಂಚೂಣಿಯಲ್ಲಿದೆ ಎಂದು ದತ್ತಾಂಶವು ತಿಳಿಸಿದೆ.

ಈ ನಡುವೆ, ಸಿಕ್ಕಿಂ ತಲಾ ಜಿಎಸ್‌ಡಿಪಿ ವಿಷಯದಲ್ಲಿ ೬.೨೫ ಲಕ್ಷ ರೂ.ಗಳೊಂದಿಗೆ ಅಗ್ರ ಸ್ಥಾನವನ್ನು ಪಡೆದುಕೊಂಡಿದೆ, ಇದು ಈಶಾನ್ಯ ರಾಜ್ಯದ ಸಮೃದ್ಧ ಮತ್ತು ಸಮಗ್ರ ಅಭಿವೃದ್ಧಿಯನ್ನು ಪ್ರತಿಬಿಂಬಿಸುತ್ತದೆ ಎಂದು ಸಾಮಾಜಿಕ ಮಾಧ್ಯಮ ಎಕ್ಸ್ ವೇದಿಕೆಯಲ್ಲಿನ ಇನ್‌ಫೋ ಇಂಡಿಯಾ ಡೇಟಾ ತಿಳಿಸಿದೆ.

"ಜಿಎಸ್‌ಡಿಪಿ ಮತ್ತು ತಲಾ ಆದಾಯದ ೨೦೨೨-೨೩ರ ಚಿತ್ರಣ ದೊರೆತಿದ್ದು, ಇದು ರಾಜ್ಯಗಳಾದ್ಯಂತ ಆರ್ಥಿಕ ಮಾದರಿಗಳನ್ನು ಎತ್ತಿ ತೋರಿಸುತ್ತದೆ. ಈ ಮೂಲಕ ಭಾರತವು ತನ್ನ ಅಭಿವೃದ್ಧಿ ಪ್ರಯಾಣವನ್ನು ಮುಂದುವರೆಸುತ್ತಿದೆ" ಎಂದು ಅಂಕಿಅಂಶ ತಿಳಿಸಿದೆ.

"ಮಹಾರಾಷ್ಟ್ರವು ಜಿಎಸ್‌ಡಿಪಿ ಉತ್ಪಾದನೆಯಲ್ಲಿ ೩೬.೪೬ ಲಕ್ಷ ಕೋಟಿ ರೂ.ಗಳೊಂದಿಗೆ ಮುಂಚೂಣಿಯಲ್ಲಿದೆ, ಆದರೆ ಸಿಕ್ಕಿಂ ತಲಾ ಜಿಎಸ್‌ಡಿಪಿ ಯಲ್ಲಿ ೬.೨೫ ಲಕ್ಷ ರೂ.ಗಳೊಂದಿಗೆ ಅಗ್ರಸ್ಥಾನದಲ್ಲಿದೆ" ಎಂದು ಇಫೋಇಂಡಿಯಾ ಡೇಟಾ ತಿಳಿಸಿದೆ .

ಇತರ ರಾಜ್ಯಗಳಾದ ಉತ್ತರ ಪ್ರದೇಶ ೨೨.೮೪, ತಮಿಳುನಾಡು ೨೩.೯೩, ಗುಜರಾತ್ ೨೨.೦೩, ಕರ್ನಾಟಕ ೨೨.೭, ಮಧ್ಯಪ್ರದೇಶ ೧೨.೪೬, ಬಿಹಾರ ೭.೪೬ ಮತ್ತು ದೆಹಲಿ ೧೦.೧೫ ಲಕ್ಷ ಕೋಟಿ ತಲಾವಾರು ಜಿಎಸ್‌ಡಿಪಿ ಹೊಂದಿದೆ.

ಈ ನಡುವೆ, ದಕ್ಷಿಣ ರಾಜ್ಯಗಳು ತಲಾವಾರು ಜಿಎಸ್‌ಡಿಪಿಯಲ್ಲಿ (ಲಕ್ಷಗಳಲ್ಲಿ) ಉತ್ತಮ ಪ್ರದರ್ಶನ ನೀಡಿವೆ. ತೆಲಂಗಾಣ ೩.೪೬ ಲಕ್ಷ, ಕರ್ನಾಟಕ ೩.೩೭ ಲಕ್ಷ, ತಮಿಳುನಾಡು ೩.೧೨ ಲಕ್ಷ, ಕೇರಳ ೨.೮೭ ಲಕ್ಷ, ಆಂಧ್ರಪ್ರದೇಶ ೨.೪೬ ಲಕ್ಷ ಹೊಂದಿದೆ.

ರಾಷ್ಟ್ರದ ರಾಜಧಾನಿ ದೆಹಲಿ ೪.೮೪ ಲಕ್ಷ, ಮಹಾರಾಷ್ಟ್ರ ೨.೯೧ ಲಕ್ಷ, ಗುಜರಾತ್ ೩.೧೨ ಲಕ್ಷ, ಅರುಣಾಚಲ ಪ್ರದೇಶ ೨.೨೭ ಲಕ್ಷ, ಉತ್ತರಾಖಂಡ ೨.೬೪ ಲಕ್ಷ, ಹಿಮಾಚಲ ಪ್ರದೇಶ ೨.೫೮ ಲಕ್ಷ, ಪಂಜಾಬ್ ೨.೨೩ ಲಕ್ಷ ಮತ್ತು ಹರಿಯಾಣ ೩.೩ ಲಕ್ಷ ತಲಾವಾರು ಜಿಎಸ್‌ಡಿಪಿ ಹೊಂದಿದೆ.

ಈ ಅಂಕಿಅಂಶಗಳಿಂದ ವಿವಿಧ ರಾಜ್ಯಗಳು ತಮ್ಮದೇ ಆದ ವಿಶಿಷ್ಟ ಗುಣಲಕ್ಷಣಗಳು ಮತ್ತು ಆರ್ಥಿಕ ಬಲಗಳೊಂದಿಗೆ ಅಭಿವೃದ್ಧಿಯತ್ತ ಸಾಗುತ್ತಿವೆ ಎಂಬುದು ಸ್ಪಷ್ಟವಾಗುತ್ತದೆ. ಭಾರತದ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ಈ ಅಂಕಿಅಂಶಗಳು, ಎಲ್ಲಾ ರಾಜ್ಯಗಳು ಅಭಿವೃದ್ಧಿ ಕ್ಷೇತ್ರದಲ್ಲಿ ತಮ್ಮ

ಪಾತ್ರಗಳನ್ನು ನಿರ್ವಹಿಸುತ್ತಿವೆ ಮತ್ತು ದೇಶದ ಸಮೃದ್ಧಿಗೆ ಕೊಡುಗೆ ನೀಡುತ್ತಿವೆ ಎಂಬುದನ್ನು ಸೂಚಿಸುತ್ತವೆ.

*****************

ಈ ತಿಂಗಳ ೩೦ ರಂದು ಆಕಾಶವಾಣಿಯಲ್ಲಿ ಪ್ರಸಾರವಾಗುವ ಜನಪ್ರಿಯ ಕಾರ್ಯಕ್ರಮ ನಡೆಯುವ ಮನ್ ಕಿ ಬಾತ್ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ನಾಗರಿಕರಿಂದ ಸಲಹೆ ಮತ್ತು ಸೂಚನೆಗಳನ್ನು ಆಹ್ವಾನಿಸಿದ್ದಾರೆ. ಇದು ಮಾಸಿಕ ರೇಡಿಯೋ ದೇಶ ವಿದೇಶದಲ್ಲಿರುವ ಕಾರ್ಯಕ್ರಮದ ೧೨೦ನೇ ಸಂಚಿಕೆಯಾಗಲಿದೆ.

ಈ ತಿಂಗಳ ಮನ್ ಕಿ ಬಾತ್ ಗಾಗಿ ಈವರೆಗೆ ವ್ಯಾಪಕ ಶ್ರೇಣಿಯ ಸಲಹೆಗಳನ್ನು ಪಡೆದಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಸಲಹೆಗಳು ಸಾಮಾಜಿಕ ಒಳಿತಿಗಾಗಿ, ಸಾಮೂಹಿಕ ಪ್ರಯತ್ನಗಳ ಶಕ್ತಿಯನ್ನು ಎತ್ತಿ ಹಿಡಿಯುತ್ತವೆ ಎಂದು ಹೇಳಿದರು.

ಸಾರ್ವಜನಿಕರು ಕಾರ್ಯಕ್ರಮಕ್ಕಾಗಿ ತಮ್ಮ ಆಲೋಚನೆಗಳು ಮತ್ತು ಸಲಹೆಗಳನ್ನು ಟೋಲ್-ಫ್ರೀ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಸಲ್ಲಿಸಬಹುದಾಗಿದೆ. ಹಾಗೂ ನರೇಂದ್ರ ಮೋದಿ ಅಪ್ಲಿಕೇಶನ್ ಅಥವಾ ಮೈ ಗೌ ಡಾಟ್ ಕಾಮ್ ಓಪನ್ ಫೋರಂ ಮೂಲಕ ಆನ್‌ಲೈನ್‌ನಲ್ಲಿಯೂ ತಮ್ಮ ಸಲಹೆಗಳನ್ನು ಹಂಚಿಕೊಳ್ಳಬಹುದು.

ಮುಂಬರುವ ಸಂಚಿಕೆಗೆ ಸಲಹೆಗಳನ್ನು ಈ ತಿಂಗಳ ೨೮ ರವರೆಗೆ ಸ್ವೀಕರಿಸಲಾಗುತ್ತದೆ. ಈ ಕಾರ್ಯಕ್ರಮವು ಆಕಾಶವಾಣಿ ಮತ್ತು ದೂರದರ್ಶನದ ಸಂಪೂರ್ಣ ನೆಟ್‌ವರ್ಕ್, ಆಕಾಶವಾಣಿ ಸುದ್ದಿ ಜಾಲತಾಣ ಮತ್ತು ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಪ್ರಸಾರವಾಗಲಿದೆ.

ಇದನ್ನು ಆಕಾಶವಾಣಿ ದೂರದರ್ಶನ ಸುದ್ದಿ ಜಾಲತಾಣ ಪಿಎಂಒ ಮತ್ತು ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ಚಾನೆಲ್‌ಗಳಲ್ಲಿಯೂ ನೇರಪ್ರಸಾರ ಮಾಡಲಾಗುತ್ತದೆ. ಹಿಂದಿ ಪ್ರಸಾರದ ನಂತರ ಆಕಾಶವಾಣಿಯು ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯಕ್ರಮವನ್ನು ಕೇಳಬಹುದು.

*****************

ದೆಹಲಿಯ ಬಿಜೆಪಿ ನೇತೃತ್ವದ ಸರ್ಕಾರ ಇಂದು ವಿಧಾನಸಭೆಯಲ್ಲಿ ೨೦೨೫-೨೬ರ ಹಣಕಾಸು ವರ್ಷದ ಬಜೆಟ್ ಅನ್ನು ಮಂಡಿಸಲಿದೆ. ಬಜೆಟ್ ಅನ್ನು ನಾಳೆ ಸದನದಲ್ಲಿ ಚರ್ಚಿಸಲಾಗುವುದು. ಚರ್ಚೆಯ ನಂತರ, ಮರುದಿನ ವಿಧಾನಸಭೆಯಲ್ಲಿ ಬಜೆಟ್ ಅನ್ನು ಅಂಗೀಕರಿಸಲಾಗುವುದು.

ಐದು ದಿನಗಳ ದೆಹಲಿ ವಿಧಾನಸಭೆ ಅಧಿವೇಶನವು ನಿನ್ನೆ ದೆಹಲಿ ಸಾರಿಗೆ ನಿಗಮ - ಡಿಟಿಸಿಯ ಕಾರ್ಯವೈಖರಿಯ ಕುರಿತು ಕಂಟ್ರೋಲರ್ ಮತ್ತು ಆಡಿಟರ್ ಜನರಲ್-ಸಿಎಜಿ ವರದಿಯನ್ನು ಸದನದಲ್ಲಿ ಮಂಡಿಸುವುದರೊಂದಿಗೆ ಪ್ರಾರಂಭವಾಯಿತು. ಸಿಎಜಿ ವರದಿಯ ಮೇಲಿನ ಚರ್ಚೆ ಇಂದು ಸಹ

ಮುಂದುವರಿಯಲಿದೆ. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಸಿಎಜಿ ವರದಿಯನ್ನು ಮಂಡಿಸಿದರು ಮತ್ತು ದೆಹಲಿ ಸರ್ಕಾರವು ರಾಷ್ಟ್ರ ರಾಜಧಾನಿಯಲ್ಲಿ ಆಮ್ ಆದ್ಮಿ ಪಕ್ಷದ ತಮ್ಮ ಹಿಂದಿನ ಆಡಳಿತದ ಅವಧಿಯ ಕುರಿತು ಶ್ವೇತಪತ್ರವನ್ನು ಹೊರಡಿಸಲಿದೆ ಎಂದು ಘೋಷಿಸಿದರು.

ಈ ವರದಿಯು ಡಿಟಿಸಿಯ ಹಣಕಾಸು ಮತ್ತು ಕಾರ್ಯಾಚರಣೆಯ ಅಂಶಗಳ ಮೇಲೆ ಬೆಳಕು ಚೆಲ್ಲುವ ನಿರೀಕ್ಷೆಯಿದೆ. ವಿವಿಧ ಇಲಾಖೆಗಳಲ್ಲಿ ಲೆಕ್ಕಪರಿಶೋಧನೆಗಳು ಇನ್ನೂ ನಡೆಯುತ್ತಿರುವುದರಿಂದ ಆರ್ಥಿಕ ಸಮೀಕ್ಷೆಯನ್ನು ಶೀಘ್ರದಲ್ಲೇ ಮಂಡಿಸಲಾಗುವುದು ಎಂದು ಅವರು ಹೇಳಿದರು. ದೆಹಲಿ ವಿಧಾನಸಭೆಯ ಬಜೆಟ್ ಅಧಿವೇಶನ ಈ ತಿಂಗಳ ೨೮ ರವರೆಗೆ ಮುಂದುವರಿಯಲಿದೆ.

*****************

ಎ.ಎಫ್.ಸಿ ಏಷ್ಯನ್ ಕಪ್ ಫುಟ್‌ಬಾಲ್ ೨೦೨೭ರ ಅರ್ಹತಾ ಪಂದ್ಯದ ನಿರ್ಣಾಯಕ ಮೂರನೇ ಸುತ್ತಿನ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶವನ್ನು ಎದುರಿಸಲಿದೆ.

ಮೇಘಾಲಯದ ಶಿಲ್ಲಾಂಗ್‌ನಲ್ಲಿರುವ, ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಪಂದ್ಯ ಇಂದು ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಕಳೆದ ಬುಧವಾರ ಮಾಲ್ಡೀವ್ಸ್ ವಿರುದ್ಧ ನಡೆದ ಅಂತರರಾಷ್ಟ್ರೀಯ ಸ್ನೇಹಪರ ಪಂದ್ಯದಲ್ಲಿ ಬ್ಲೂ ಟೈಗರ್ಸ್ ೩-೦ ಅಂತರದ ಭರ್ಜರಿ ಜಯ ಸಾಧಿಸಿದೆ. ಈ ಗೆಲುವು ಮುಖ್ಯ ಕೋಚ್ ಮನೋಲೋ ಮಾರ್ಕ್ವೆಜ್ ನೇತೃತ್ವದಲ್ಲಿ ಭಾರತದ ಮೊದಲ ಜಯವಾಗಿದೆ

ಭಾರತವು ಎ.ಎಫ್.ಸಿ ಏಷ್ಯನ್ ಕಪ್ ೨೦೨೭ ಅರ್ಹತಾ ಪಂದ್ಯಗಳ ಅಂತಿಮ ಸುತ್ತಿನ ಸಿ ಗುಂಪಿನಲ್ಲಿ ಹಾಂಗ್ ಕಾಂಗ್, ಸಿಂಗಾಪುರ ಮತ್ತು ಬಾಂಗ್ಲಾದೇಶದ ಜೊತೆಗೆ ಸ್ಥಾನ ಪಡೆದಿದೆ. ತಂಡಗಳು ಮಾರ್ಚ್ ೨೦೨೬ ರವರೆಗೆ ಸ್ಪರ್ಧಿಸಲಿದ್ದು, ಗುಂಪು ಹಂತದ ವಿಜೇತರು ಸೌದಿ ಅರೇಬಿಯಾದಲ್ಲಿ ನಡೆಯುವ ಎ.ಎಫ್.ಸಿ ಏಷ್ಯನ್ ಕಪ್ ಪಂದ್ಯಾವಳಿಗೆ ಮುನ್ನಡೆಯುತ್ತಾರೆ.

*****************

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ, ನಿನ್ನೆ ರಾತ್ರಿ ವಿಶಾಖಪಟ್ಟಣಂನ ವೈ.ಎಸ್. ರಾಜಶೇಖರ ರೆಡ್ಡಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಕೊನೆಯ ಓವರ್‌ನ ರೋಮಾಂಚಕ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ಒಂದು ವಿಕೆಟ್‌ನಿಂದ ಸೋಲಿಸಿತು.

ಎಲ್‌ಎಸ್‌ಜಿ ನೀಡಿದ್ದ ೨೧೦ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ಕ್ಯಾಪಿಟಲ್ಸ್ ೧೯.೩ ಓವರ್‌ಗಳಲ್ಲಿ ೯ ವಿಕೆಟ್‌ಗಳಿಗೆ ೨೧೧ ರನ್ ಗಳಿಸುವಲ್ಲಿ ಯಶಸ್ವಿಯಾಯಿತು. ಒಂದು ಹಂತದಲ್ಲಿ ಡೆಲ್ಲಿ ೫ ವಿಕೆಟ್‌ಗಳಿಗೆ ೬೫ ರನ್‌ಗಳಲ್ಲಿ ಸಂಕಷ್ಟದಲ್ಲಿತ್ತು, ಆದರೆ ಇಂಪ್ಯಾಕ್ಟ್ ಪ್ಲೇಯರ್ ಅಶುತೋಷ್ ಶರ್ಮಾ ಮತ್ತು ಚೊಚ್ಚಲ ಆಟಗಾರ ವಿಪ್ರಜ್ ನಿಗಮ್ ಪಂದ್ಯವನ್ನು ಡೆಲ್ಲಿ ಪರವಾಗಿ

ತಿರುಗಿಸಿದರು. ಸಿಕ್ಸರ್ ಸಿಡಿಸುವ ಮೂಲಕ ಜಯ ಸಾಧಿಸಿದ ಅಶುತೋಷ್ ತಮ್ಮ ೬೬ ರನ್‌ಗಳ ಆಟಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇದಕ್ಕೂ ಮೊದಲು, ಟಾಸ್ ಸೋತು ಬ್ಯಾಟಿಂಗ್ ಮಾಡಿದ ಎಲ್‌ಎಸ್‌ಜಿ ತಂಡವು ೨೦ ಓವರ್‌ಗಳಲ್ಲಿ ೮ ವಿಕೆಟ್‌ಗಳಿಗೆ ೨೦೯ ರನ್ ಗಳಿಸಿತು. ಎಲ್‌ಎಸ್‌ಜಿ ಪರ ಮಿಚೆಲ್ ಮಾರ್ಷ್ ೭೨ ರನ್ ಗಳಿಸಿದರೆ, ನಿಕೋಲಸ್ ಪೂರನ್ ೭೫ ರನ್ ಗಳಿಸಿದರು. ದೆಹಲಿ ಪರ ಮಿಚೆಲ್ ಸ್ಟಾರ್ಕ್ ೩ ವಿಕೆಟ್‌ಗಳನ್ನು ಪಡೆದು ಅತ್ಯುತ್ತಮ ಬೌಲರ್ ಆಗಿದ್ದರು.

ಇಂದಿನ ಪಂದ್ಯದಲ್ಲಿ, ಗುಜರಾತ್ ಟೈಟಾನ್ಸ್ ತಂಡವು, ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಸೆಣಸಲಿದೆ. ಪಂದ್ಯವು ಭಾರತೀಯ ಕಾಲಮಾನ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ.

*****************

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ-ಬಿಸಿಸಿಐ ೨೦೨೪-೨೫ರ ಋತುವಿಗಾಗಿ ಭಾರತೀಯ ಮಹಿಳಾ ತಂಡಕ್ಕೆ ರಿಟೈನರ್‌ಶಿಪ್ ಒಪ್ಪಂದವನ್ನು ಘೋಷಿಸಿದೆ. ಇದು ಅಕ್ಟೋಬರ್ ೧, ೨೦೨೪ ರಿಂದ ಸೆಪ್ಟೆಂಬರ್ ೩೦, ೨೦೨೫ ರವರೆಗಿನ ಅವಧಿಯನ್ನು ಒಳಗೊಂಡಿದೆ.

ಮೂರು ಮಾದರಿಗಳ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಸ್ಟಾರ್ ಆಟಗಾರ್ತಿ ಸ್ಮೃತಿ ಮಂಧಾನ ಮತ್ತು ಆಲ್‌ರೌಂಡರ್ ದೀಪ್ತಿ ಶರ್ಮಾ ಅವರ ಸ್ಥಿರ ಪ್ರದರ್ಶನದಿಂದಾಗಿ ಅವರನ್ನು ಎ ಗ್ರೇಡ್‌ನಲ್ಲಿ ಇರಿಸಲಾಗಿದೆ.

*****************